ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**
**ನಿರ್ಮಲ ಭಾರತ್ ಅಭಿಯಾನ**

ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/ಆರ್-ಎಐಪಿ/47/2012-13 ದಿನಾಂಕ:17.09.2013

**ರವರಿಗೆ,**

ವ್ಯವಸ್ಥಾಪಕ ನಿರ್ದೇಶಕರು,
ಕೆಆರ್ಐಡಿಎಲ್,
ಆನಂದರಾವ್ ವೃತ್ತ,
ಬೆಂಗಳೂರು.

ಮಾನ್ಯರೇ,

**ವಿಷಯ:** ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸಲು ಸಾಧ್ಯವಾಗುವಂತಹ ಗೃಹ ಶೌಚಾಲಯ ಹಾಗೂ ಸ್ನಾನದ ಕೊಠಡಿಗೆ ಹೊಂದಿಕೊಂಡಂತೆ ವೈಯಕ್ತಿಕ ಶೌಚಾಲಯದ ಮಾದರಿ ವಿವರ ಕುರಿತಂತೆ.

**ಉಲ್ಲೇಖ:** ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ದೂರವಾಣಿ ಸಂದೇಶದಂತೆ, ದಿನಾಂಕ 17.09.2013.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ನಿರ್ದೇಶಿಸಿರುವಂತೆ, ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸಲು ಸಾಧ್ಯವಾಗುವಂತಹ ಸ್ನಾನದ ಕೊಠಡಿಗೆ ಹೊಂದಿಕೊಂಡಂತೆ ವೈಯಕ್ತಿಕ ಶೌಚಾಲಯದ ಮಾದರಿ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಅಂದಾಜು ಮೊತ್ತ ರೂ.15,000/-ಕ್ಕೆ (Unit cost) ಸೀಮಿತಗೊಳಿಸಿ ಕೆಳಕಂಡ ಮಾದರಿಯಲ್ಲಿ ನೀಡಲು ಸೂಚಿಸಿರುತ್ತಾರೆ.

1. Household Toilet with Twin pit.
2. Household Toilet with Septic tank.
3. Toilet with Bathroom attached.

ಈ ಮೂರು ಮಾದರಿಯ ರಚನೆ, ವಿನ್ಯಾಸ, ಅಂದಾಜು ಪಟ್ಟಿ, ನಕ್ಷೆಯನ್ನು ಪ್ರತ್ಯೇಕವಾಗಿ ಎನ್‌ಬಿಎ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಇದನ್ನು **"ಅತೀ ಜರೂರು" ಎಂದು ಭಾವಿಸಿ ದಿನಾಂಕ:21.09.2013ರೊಳಗೆ ಸಲ್ಲಿಸುವಂತೆ ನಿರ್ದೇಶಿತನಾಗಿರುತ್ತೇನೆ.**

ತಮ್ಮ ವಿಶ್ವಾಸಿ,

ಮಿಷನ್ ನಿರ್ದೇಶಕರು
ರಾ.ನೀ&ನೈ.ಮಿಷನ್ ಹಾಗೂ ಸರ್ಕಾರದ
ಪದನಿಮಿತ್ತ ಅಪರ ಕಾರ್ಯದರ್ಶಿಗಳು
ಗ್ರಾ. ಅ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:-**

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2. ಕಾರ್ಯದರ್ಶಿಗಳು (ಪಂ.ರಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.